# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**<u>ಸಿ.ಸಿ. ಸಂಖ್ಯೆಃ 55/2018</u>**

ಫಿರ್ಯಾದಿದಾರ ಆರ್.ಜಿ. ನಂದಕುಮಾರ,
ಬಿನ್ ಗೋಪಾಲಕೃಷ್ಣ,
33 ವರ್ಷ,
ವಾಸಃ ರತ್ನಪುರಿ ಗ್ರಾಮ, ಕಸಬಾ ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

## ವಿರುದ್ಧ,

ಆರೋಪಿ/ಗಳು ಜಯಮ್ಮ ಬಿ.ಜಿ. ಕೋಂ ಶ್ರೀಕಾಂತ ಕೆ.,
ವಯಸ್ಸು ಸುಮಾರು 38 ವರ್ಷ,
ವಾಸಃ ಶ್ರೀ ದುರ್ಗಾ, ಆನೆಮಜಲು ರಸ್ತೆ,
ದಾಮೋದರ ಕಂಪೌಂಡ್, ಬನ್ನೂರು ರಸ್ತೆ,
ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ.

<u>ಆಪಾದನೆ</u>

ಆರೋಪಿಯಾದ ನೀವು ಪಿರ್ಯಾದಿಯಿಂದ ರೂ. 1,00,000/- ರೂಪಾಯಿಗಳನ್ನು ನಿಮ್ಮ ಮನೆಯ ಅವಶ್ಯಕತೆಗಾಗಿ ಸಾಲವಾಗಿ ಪಡೆದಿದ್ದು, ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು ನಂಃ042742 ದಿಃ 27.02.2013 ರಲ್ಲಿ ರೂ. 1,00,000-00 ಪುತ್ತೂರು ಕೋ-ಆಫ್ ರೆಟಿವ್ ಟೌನ್ ಬ್ಯಾಂಕ್ ಲಿಮಿಟೆಡ್, ಪುತ್ತೂರು ಶಾಖೆಯ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರನು ತನ್ನ ಖಾತೆ ಹೊಂದಿರುವ, ಕಾವೇರಿ ಗ್ರಾಮೀಣ ಬ್ಯಾಂಕ್, ಆಸ್ಪತ್ರೆ ಕಾವಲ್ ಶಾಖೆಗೆ ನಗಧೀಕರಣಕ್ಕೆ ಸಲ್ಲಿಸಿದ್ದು ಸದರಿ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿಃ 06.04.2013 ರಂದು ಹಿಂಬರಹ ನೀಡಿರುತ್ತಾರೆ. ಈ ಬಗ್ಗೆ ದಿಃ 20.04.2013 ರಂದು ತಮಗೆ ನೋಟಿಸ್ ನೀಡಿದ್ದು ಅದು ನಿಮಗೆ ದಿಃ 25.04.2013 ರಂದು ಜಾರಿಯಾಗಿದ್ದು, ನೀವು ಹಣ ನೀಡದೇ ವಿಫಲರಾಗಿರುತ್ತೀರಿ. ಆದ್ದರಿಂದ ನೀವು ಕಲಂ 138 ಎನ್.ಐ ಆಕ್ಟ್ ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಯಾವುದಾದರೂ ಪ್ರತಿ ರಕ್ಷಣೆ ಇದೆಯೇ?

ಉತ್ತರಃ

ದಿಃ**18.01.2024**
ಸ್ಥಳಃ ಹುಣಸೂರು

(ಮನು ಪಟೇಲ್ ಬಿ.ವೈ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ದಂಡಾಧಿಕಾರಿಗಳು, ಹುಣಸೂರು